# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಕಿಇಂ(ವಿ)/ಜಕ್ಕಸಂದ್ರ ಶಾಖೆ/24-25/ 27
ಲಗತ್ತು:

ಬೆವಿಕಂ
BESCOM

ರವರ ಕಛೇರಿ
ಕಿರಿಯ ಇಂಜಿನಿಯರ್ (ವಿ)
ಬೆವಿಕಂ , ಜಕ್ಕಸಂದ್ರ ಶಾಖೆ
ದೂರವಾಣಿ ಸಂಖ್ಯೆ : 9449872583
ದಿನಾಂಕ: 03-02-2025

656
3/2/25

ರವರಿಗೆ,
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನ , ಬೆವಿಕಂ
ಹಾರೋಹಳ್ಳಿ ಉಪ-ವಿಭಾಗ

ಮಾನ್ಯರೆ,

**ವಿಷಯ:** ಜಕ್ಕಸಂದ್ರ ಬೆವಿಕಂ ಶಾಖಾ ವ್ಯಾಪ್ತಿಯ ಯಡವನಹಳ್ಳಿ ಗ್ರಾಮದಲ್ಲಿ ಗುಂಡು ತೋಪು ಎನ್ನುವ ಸ್ಥಳದಲ್ಲಿರುವ ವಾಣಿಜ್ಯ ಸಂಬಂಧಿತ ಸ್ಥಾವರಗಳ ಮಾಪಕಗಳನ್ನು ಸುರಕ್ಷತಾ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಕಳಚಿರುವ ವರದಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** ತಹಶಿಲ್ದಾರ್ , ಹಾರೋಹಳ್ಳಿ ತಾಲ್ಲೂಕು ರವರ ದೂರವಾಣಿ ಕರೆ ದಿನಾಂಕ: 31.01.2025

***************************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆವಿಕಂ ಹಾರೋಹಳ್ಳಿ ಉಪ-ವಿಭಾಗ , ಜಕ್ಕಸಂದ್ರ ಶಾಖಾ ವ್ಯಾಪ್ತಿಯ ಬರುವ ಯಡವನಹಳ್ಳಿ ಗ್ರಾಮದ ಗುಂಡುತೋಪು ಎನ್ನುವ ಸ್ಥಳದಲ್ಲಿನ ವಾಣಿಜ್ಯ ಕಟ್ಟಡಗಳನ್ನು ನೆಲಸಮಗೊಳಿಸಬೇಕಾಗಿರುವುದರಿಂದ ಸದರಿ ಸ್ಥಳದಲ್ಲಿನ ಬೆವಿಕಂ ಸ್ಥಾವರಗಳ ಮಾಪಕಗಳನ್ನು ಕಳಚುವಂತೆ ತಹಶಿಲ್ದಾರ್ ರವರು , ಹಾರೋಹಳ್ಳಿ ತಾಲ್ಲೂಕು ರವರು ಮೇಲ್ಕಂಡ ಉಲ್ಲೇಖಿತ ದಿನಾಂಕದಂದು ದೂರವಾಣಿ ಮುಖೇನ ಕೋರಿರುತ್ತಾರೆ , ಸದರಿ ರವರ ಕೋರಿಕೆಗೆ ಬೆವಿಕಂ ನ ಮಾಪಕಗಳನ್ನು ಕಳಚಬೇಕಾದಲ್ಲಿ ಈ ಸಂಬಂಧ ಪತ್ರ ಮುಖೇನ ಕೋರಿದ್ದಲ್ಲಿ ಬೆವಿಕಂ ನಿಯಮಾನುಸಾರ ಕ್ರಮವಹಿಸಲಾಗುವುದೆಂದು ತಿಳಿಸಿರುತ್ತೇನೆ.

ತದನಂತರ ಸದರಿ ವಿಷಯವನ್ನು ತಮಗೂ ಸಹ ತಿಳಿಸಿ , ನಂತರ ದಿನಾಂಕ: 01.02.2025 ರಂದು ತಹಶಿಲ್ದಾರ್ ರವರು , ಹಾರೋಹಳ್ಳಿ ತಾಲ್ಲೂಕು ರವರ ಕಛೇರಿಯಿಂದ ಬೆವಿಕಂ ಗೆ ಯಾವುದೇ ಪತ್ರ ವ್ಯವಹಾರ ಮಾಡದೇ , ಸದರಿ ಗುಂಡುತೋಪಿನ ಸ್ಥಳದಲ್ಲಿರುವ ವಾಣಿಜ್ಯ ಕಟ್ಟಡಗಳನ್ನು ನೆಲಸಮಗೊಳಿಸುವ ವಿಷಯ ತಿಳಿದಿದ್ದರಿಂದ ಸದರಿ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಸ್ಥಾವರಗಳ ಆಂತರಿಕ ವೈರಿಂಗ್ ವ್ಯವಸ್ಥೆ ಹಾಳಾಗಿ (ಕಟ್ಟಡ ನೆಲಸಮಗೊಳಿಸುವಾಗ ಸ್ಥಾವರ ಸ್ಥಳದಲ್ಲಿನ ಸ್ಥಿತಿಯ ಛಾಯಚಿತ್ರಗಳನ್ನು ಇದರೊಡನೆ ಲಗತ್ತಿಸಿರುತ್ತೇನೆ) ವಿದ್ಯುತ್ ಅವಘಡ ಸಂಭವಿಸುವ ಸ್ಥಿತಿಯಲ್ಲಿದ್ದರಿಂದ ಸುರಕ್ಷತಾ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ನಮ್ಮ ಬೆವಿಕಂ ಆಸ್ತಿಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಹಾಗೂ ತಮ್ಮ ನಿರ್ದೇಶನದ ಅನುಸಾರ ಸದರಿ ಜಾಗದಲ್ಲಿನ ಸ್ಥಾವರಗಳ 13 ಸಂಖ್ಯೆಯ ವಾಣಿಜ್ಯ ಉದ್ದೇಶಿತ ಮಾಪಕಗಳನ್ನು ಕಳಚಿ , ಜಕ್ಕಸಂದ್ರ ಶಾಖಾ ಆರ್.ಆರ್ ಕಡತಲ್ಲಿ ನಮೂದಿಸಿರಲಾಗಿರುತ್ತದೆ.

**ಕಳಚಿರುವ ಸ್ಥಾವರವಾರು ಮಾಪಕಗಳ ವಿವರ:**

| ಕ್ರ.ಸಂ | ಆರ್.ಆರ್ ಸಂಖ್ಯೆ | ಮಾಪಕ ಸಂಖ್ಯೆ | ತಯಾರಿಕೆ | ವಿಧಾನ | ಅಂತಿಮ ರೀಡಿಂಗ್ | ಎಂ.ಡಿ |
|---|---|---|---|---|---|---|
| 1 | HSL5953 | 59805699 | HPL | 1 Phase | 5483 | 0.11 |
| 2 | KUL15032 | BC067474 | L & G | 1 Phase | 4227 | 0.1 |
| 3 | KUL16135 | BC0291913 | L & G | 1 Phase | 9382 | 0.11 |
| 4 | KUL16136 | BC0291914 | L & G | 1 Phase | 20421 | 0.11 |
| 5 | KUL16354 | BC0333824 | L & G | 1 Phase | 13341 | 0.11 |
| 6 | KUL16355 | BC0333825 | L & G | 1 Phase | 3841 | 0.17 |
| 7 | KUL12890 | A8801955 | L & T | 1 Phase | 29 | 0.23 |
| 8 | KUL12891 | A8801953 | L & T | 1 Phase | 40 | 0.08 |
| 9 | KUL14908 | BC091524 | L & G | 1 Phase | 8432 | 0.1 |
| 10 | KUL14036 | 41806743 | L & T | 1 Phase | 6292 | 0.10 |
| 11 | KUL14556 | A8801957 | L & T | 1 Phase | 76 | 0.6 |
| 12 | KUL14557 | A8801943 | L & T | 1 Phase | 100 | 0.26 |
| 13 | KUL14558 | A8801958 | L & T | 1 Phase | 24 | 0.15 |

Prepare final bill for the above installations

CNS-Takkasandra 03/02/25

ಮುಂದಿನ ಪುಟಕ್ಕೆ........

ಮೇಲ್ಕಂಡಂತೆ ಬೆವಿಕಂ , ಜಕ್ಕಸಂದ್ರ ಶಾಖಾ ವ್ಯಾಪ್ತಿಯಲ್ಲಿನ ಯಡವನಹಳ್ಳಿ ಗ್ರಾಮದ ಗುಂಡು ತೋಪಿನಲ್ಲಿರುವ ವಾಣಿಜ್ಯ ಕಟ್ಟಡಗಳನ್ನು ಹಾರೋಹಳ್ಳಿ ತಾಲ್ಲೂಕು ಕಾರ್ಯಲಯ ಅವರಿಂದ ನೆಲಸಸಮಗೊಳಿಸಿರುವ ಜಾಗದಲ್ಲಿರುವ ಬೆವಿಕಂ ವಾಣಿಜ್ಯ ಸ್ಥಾವರಗಳ ಮಾಪಕಗಳನ್ನು ಕಳಚಿರುವ ವರದಿಯನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಈ ಮೂಲಕ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,

Mahadev

ಕಿರಿಯ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನ ಶಾಖೆ , ಬೆವಿಕಂ
ಜಕ್ಕಸಂದ್ರ

ಪ್ರತಿಗಳು:

1) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನ ವಿಭಾಗ , ಬೆವಿಕಂ , ಕನಕಪುರ ರವರ ಮಾಹಿತಿಗಾಗಿ.
2) ಕಛೇರಿ ಕಡತ / ಮಹಾ ಕಡತ.